೩) ರಾಷ್ಟ್ರೀಯ ನವೋದಯ ಶಾಲೆಗಳಿಗೆ ಪ್ರವೇಶಾವಕಾಶ ಹಾಗೂ ಬೋಧನ ಶಿಕ್ಷಣ ಮಾಧ್ಯಮದ ಬಗ್ಗೆ

ಶ್ರೀ ಜ್ಞಾನದೇವ ದೊಡ್ಡಮೇಟಿ.—ಕೇಂದ್ರಸರ್ಕಾರ ನೀಡಿರುವ ರಾಷ್ಟ್ರೀಯ ನವೋದಯ ಶಾಲೆಗಳಿಗೆ ಪ್ರವೇಶಾವಕಾಶ ಮತ್ತು ಬೋಧನಾ ಶಿಕ್ಷಣ ಮಾಧ್ಯಮದ ಬಗ್ಗೆ ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಬೇಕು.

ಅಧ್ಯಕ್ಷರು.—ಅಜೆಂಡಾದಲ್ಲಿ ಇರುತ್ತದಲ್ಲ ಅದನ್ನು ಓದಿ ಹೇಳಿ.

ಶ್ರೀ ಜ್ಞಾನದೇವ ದೊಡ್ಡಮೇಟಿ.—ರಾಷ್ಟ್ರೀಯ ನವೋದಯ ಶಾಲೆಗಳಿಗೆ ದೊರಕುವ ಪ್ರವೇಶಾವಕಾಶ ಹಾಗೂ ಬೋಧನಾ ಶಿಕ್ಷಣ ಮಾಧ್ಯಮದ ಬಗ್ಗೆ ರಾಜ್ಯ ಸರ್ಕಾರದ ನಿಲುವಿನ ಬಗ್ಗೆ ಶಿಕ್ಷಣ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ನವೋದಯ ಶಾಲೆಗಳನ್ನೂ ಒಳಗೊಂಡಂತೆ, ನೂತನ ಶಿಕ್ಷಣ ನೀತಿಯು ಎಲ್ಲ ಅಂಶಗಳ ಬಗ್ಗೆ ರಾಜ್ಯ ಸರ್ಕಾರ ತನ್ನ ನಿಲುವನ್ನು ಕೇಂದ್ರ ಸರ್ಕಾರಕ್ಕೆ ಸ್ಪಷ್ಟ ಪಡಿಸುವ ಮುನ್ನ ಶಾಸಕರು ; ಶಿಕ್ಷಣ ವೇತ್ತರು ಶಿಕ್ಷಣ ರಂಗದಲ್ಲಿ ದುಡಿದವರು ಎಲ್ಲರೊಡನೆ ಸಮಾಲೋಚಿಸಿದೆ.

೨) ನವೋದಯ ಶಾಲೆಗಳ ಸ್ಥಾಪನೆ ಸಂಬಂಧವಾಗಿ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ತನ್ನ ನಿಲುವನ್ನು ಸ್ಪಷ್ಟಪಡಿಸುವಾಗ ಈ ಕೆಳಗಿನ ಅಂಶಗಳಿಗೆ ಒತ್ತುಕೊಟ್ಟಿತು.

ಅ) ಬೋಧನಾ ಮಾಧ್ಯಮ ಪ್ರಾದೇಶಿಕ ಭಾಷೆಯಾಗಿರಬೇಕು ಮತ್ತು ಅದು ರಾಜ್ಯದಲ್ಲಿ ಜಾರಿಯಲ್ಲಿರುವ ತ್ರಿಭಾಷಾ ಸೂತ್ರಕ್ಕೆ ಅನುಗುಣವಾಗಿರಬೇಕು.

ಆ) ಪರಿಶಿಷ್ಟ ಜಾತಿ ; ಬುಡಕಟ್ಟು ವಿದ್ಯಾರ್ಥಿಗಳಿಗೆ ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಇಂತಹ ಶಾಲೆಗಳಿಗೆಲ್ಲ ಸಾಕಷ್ಟು ಪ್ರವೇಶಾವಕಾಶ ಇರಬೇಕು.

3) ಪ್ರವೇಶಾವಕಾಶ :

ಕೇಂದ್ರ ಸರ್ಕಾರ ರೂಪಿಸಿರುವ ನವೋದಯ ಶಾಲೆಯ ಯೋಜನೆ ಅನ್ವಯ ಮಕ್ಕಳ ದಾಖಲಾತಿಯು ಒಂದು ಪ್ರವೇಶ ಪರೀಕ್ಷೆಯ ಮೂಲಕ ಆಗುತ್ತದೆ. ಪ್ರವೇಶಾವಕಾಶದಲ್ಲಿ ಈ ಕೆಳಗಿನ ಅಂಶಗಳಿಗೆ ಒತ್ತು ನೀಡಿರುವುದರಿಂದ ಇದು ಸ್ವಾಗತಾರ್ಹ :—

೧) ಶೇಕಡಾ ೭೫ ರಷ್ಟು ಸ್ಥಾನಗಳನ್ನು ಗ್ರಾಮೀಣ ವಿದ್ಯಾರ್ಥಿಗಳಿಗೆ ನೀಡಲಾಗುವುದು.

೨) ಹೆಣ್ಣು ಮಕ್ಕಳ ಪ್ರವೇಶಕ್ಕೆ ಆದ್ಯತೆ ನೀಡುವುದು.

೩) ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇಲ್ಲದೆ ಅವಕಾಶ ನೀಡುವುದು.

೪) ಪರೀಕ್ಷಾ ವಿಧಾನವು ಎನ್. ಸಿ. ಇ. ಆರ್. ಟಿ. ಯು ರೂಪಿಸಿದ್ದು ಸರಳವಾಗಿರುವುದು.

೫) ಪ್ರವೇಶ ಪರೀಕ್ಷೆಯನ್ನು ಪ್ರಾದೇಶಿಕ ಭಾಷೆ, ಮಾತೃ ಭಾಷೆಯಲ್ಲಿ ನಡೆಸಲಾಗುವುದು.

4) ಬೋಧನಾ ಮಾಧ್ಯಮ :

ಕರ್ನಾಟಕದಲ್ಲಿ ಕನ್ನಡಕ್ಕೆ ಆದ್ಯತೆ ಎಂಬುದೇ ರಾಜ್ಯ ಸರ್ಕಾರದ ನಿಲುವು. ನವೋದಯ ಶಾಲೆಗಳಲ್ಲಿ ಪ್ರಾದೇಶಿಕ ಭಾಷೆಗಳಿಗೆ ಸ್ಥಾನವಿದೆ. ಪ್ರಾಥಮಿಕ ತರಗತಿಯಲ್ಲಿ ಬೋಧನಾ ಮಾಧ್ಯಮವು ಪ್ರಾದೇಶಿಕ ಭಾಷೆ, ಅಂದರೆ ಕನ್ನಡದಲ್ಲೇ ನಡೆಯುವುದು. ನಂತರ ಹಿಂದಿ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಆಗುವುದು.

೫) ನವೋದಯ ಶಾಲೆಗಳಲ್ಲಿ ತ್ರಿಭಾಷಾ ಸೂತ್ರವನ್ನು ಅಳವಡಿಸಲಾಗಿದೆ. ಅಂದರೆ, ಕಡ್ಡಾಯವಾಗಿ ಪ್ರಾದೇಶಿಕ ಭಾಷೆ (ಕನ್ನಡ), ರಾಷ್ಟ್ರ ಭಾಷೆ.(ಹಿಂದಿ) ಮತ್ತು ಅಂತರ ರಾಷ್ಟ್ರೀಯ ಭಾಷೆ ಯೊಂದನ್ನು ಕಲಿಸಲಾಗುವುದು. ಪ್ರಾಥಮಿಕ ಹಂತದ ನಂತರ ಶೇಕಡಾ ೨೦ ರಷ್ಟು ವಿದ್ಯಾರ್ಥಿಗಳನ್ನು

ಹಿಂದಿಯೇತರ ಪ್ರದೇಶಗಳಿಂದ ಹಿಂದಿ ಮಾತನಾಡುವ ಪ್ರದೇಶಗಳ ಶಾಲೆಗೂ ಮತ್ತು ಹಿಂದಿ ಮಾತನಾಡುವ ಪ್ರದೇಶಗಳ ಶಾಲೆಯಿಂದ, ಹಿಂದಿಯೇತರ ಪ್ರದೇಶಗಳ ಶಾಲೆಗಳಿಗೂ ವರ್ಗಾಯಿಸಲಾಗುವುದು. ಹಿಂದಿ ಮಾತನಾಡುವ ಪ್ರದೇಶಗಳಲ್ಲಿನ ಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳು ಶೇಕಡಾ ೨೦ ರಷ್ಟು ವಿದ್ಯಾರ್ಥಿಗಳು ಯಾವ ಪ್ರದೇಶದಿಂದ ವರ್ಗವಾಗಿ ಬರುವರೋ ಆ ಪ್ರದೇಶದ ಭಾಷೆಯನ್ನು ಮೂರನೆಯ ಭಾಷೆಯಾಗಿ ಕಲಿಯುವರು.

೬) ಈ ಮೇಲಿನ ನಿಯಮದ ಅನ್ವಯ ಮಂಜೂರಾಗುವ ದಿನಗಳಲ್ಲಿ ಉತ್ತರ ಭಾರತದ ೨೦ ನವೋದಯ ಶಾಲೆಗಳಲ್ಲಿ ಹಿಂದಿ ಮಾತೃಭಾಷೆಯ ವಿದ್ಯಾರ್ಥಿಗಳು ಕನ್ನಡ ಕಲಿಯಬಹುದಾಗಿದೆ. ಈ ಭಾಷೆಯನ್ನು ಗುರುತಿಸಿ ಕನ್ನಡಿಗರ ಸಂಸ್ಕೃತಿಯ ಬಗ್ಗೆ ಅರಿಯುತ್ತಾರೆ. ಈ ಭಾಷೆಯನ್ನು ಗೌರವಿಸುತ್ತಾರೆ ಎನ್ನುವುದು ಒಂದು ಉತ್ತಮ ಅಂಶ ಹಾಗೂ ಸ್ವಾಗತಾರ್ಹ.

ಜಿಲ್ಲೆಗಳ ಆಯ್ಕೆ :

೭) ರಾಷ್ಟ್ರದ ಪ್ರತಿ ಜಿಲ್ಲೆಯಲ್ಲಿಯೂ ಒಂದು ನವೋದಯ ಶಾಲೆ ಆರಂಭವಾಗುವುದರಿಂದ ಜಿಲ್ಲೆಗಳ ಆಯ್ಕೆಯ ಪ್ರಶ್ನೆ ಬರುವುದಿಲ್ಲ. ಪ್ರತಿ ಜಿಲ್ಲೆಯಲ್ಲಿ ಸ್ಥಳ ನಿರ್ಧರಿಸಲು ಕೇಂದ್ರ ಸರ್ಕಾರ ಪರಿಣಿತರ ಸಮಿತಿ ರಚಿಸಿದೆ. ಇದರಲ್ಲಿ ರಾಜ್ಯ ಸರ್ಕಾರದ ಹಿರಿಯ ಅಧಿಕಾರಿಯೂ ಇದ್ದಾರೆ.

ಈ ವರ್ಷ ಮೊದಲ ವರ್ಷವಾಗಿದ್ದು, ಎಲ್ಲ ಜಿಲ್ಲೆಗಳ ಸಮೀಕ್ಷೆ ನಡೆಸಲು ಕಾಲಾವಕಾಶ ಇರಲಿಲ್ಲ. ಆದ್ದರಿಂದ ಮೊದಲನೆ ಹಂತವಾಗಿ, ರಾಜ್ಯ ಒದಗಿಸಬೇಕಾದ ೩೦ ಎಕರೆ ಜಮೀನು ಮತ್ತು ತಾತ್ಕಾಲಿಕ ಕಟ್ಟಡ ಸೌಕರ್ಯಗಳು ಇರುವ ಆರು ಜಿಲ್ಲೆಗಳನ್ನು ಮಾತ್ರ ಈ ಸಮಿತಿ ಆಯ್ಕೆ ಮಾಡಲಾಗಿದೆ. ೧೯೯೦ರ ವೇಳೆಗೆ ಪ್ರತಿ ಜಿಲ್ಲೆ ನವೋದಯ ಶಾಲೆ ಹೊಂದಿರಬಹುದು.

೮) ಈ ನವೋದಯ ಶಾಲೆಗಳ ಮುಖ್ಯ ಗುರಿಗಳು ;—

೧) ರಾಷ್ಟ್ರೀಯ ಭಾವೈಕ್ಯತೆಯನ್ನು ಸಾಧಿಸುವುದು.

೨) ಗ್ರಾಮೀಣ ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆಯನ್ನು ಗುರುತಿಸಿ ಅದು ವಿಕಾಸಗೊಳ್ಳಲು ಅವಕಾಶ ಮಾಡುವುದು.

೩) ಮಕ್ಕಳಲ್ಲಿ ಸಮಾನತೆಯ ಅರಿವು ಮೂಡಿಸಿ ಶಿಕ್ಷಣ ಸೌಲಭ್ಯಗಳಿಂದ ವಂಚಿತರಾದ ಮಕ್ಕಳಿಗೆ ಸಮಾನ ಅವಕಾಶ ಕಲ್ಪಿಸುವುದು.

ಇವೆಲ್ಲ ಉತ್ತಮ ಅಂಶಗಳು. ಉತ್ತಮ ಅಂಶಗಳ ಯಾವ ಮೂಲದಿಂದಲೇ ಆಗಲಿ ಅವುಗಳನ್ನು ಸ್ವೀಕರಿಸುವುದು ಒಳ್ಳೆಯದು. ರಾಜ್ಯ ಸರ್ಕಾರ ಇದನ್ನು ಸ್ವಾಗತಿಸುತ್ತದೆ.

ಶ್ರೀ ಜಿ.ಎಸ್.ನಡೇವ ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೆ, ಕೇಂದ್ರ ಶಿಕ್ಷಣ ನೀತಿಯಿಂದ ರಾಜ್ಯದ ಶಿಕ್ಷಣದ ಮೇಲೆ ಆಗುವ ಪರಿಣಾಮ ಏನು ಎಂಬುದನ್ನು ವಿವೇಚನೆ ಮಾಡಿದ್ದೀರಾ ? ಈ ದಿಸೆಯಲ್ಲಿ ಆಂಧ್ರ ಮತ್ತು ತಮಿಳುನಾಡು ಸರ್ಕಾರಗಳು ತಮ್ಮ ರಾಜ್ಯದ ಶಿಕ್ಷಣ ನೀತಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀಳದಂತೆ ರಾಷ್ಟ್ರೀಯ ಶಿಕ್ಷಣ ನೀತಿಯಾಗಿರಬೇಕು ಎಂದು ಮತ್ತು ರಾಷ್ಟ್ರಭಾಷೆ, ಮಾತೃಭಾಷೆಯ ಸಂಪೂರ್ಣ ಬೆಳವಣಿಗೆಗೆ ಪೋಷಕವಾಗಿರಬೇಕೆಂದು ತಮ್ಮ ಹೇಳಿಕೆಗಳನ್ನು ನೀಡಿವೆ. ಇದರಿಂದ ಒನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಓದಲಾಂ ಸಾಧ್ಯವಿಲ್ಲದಿರುವಾಗ ಕನ್ನಡಕ್ಕೆ ಆದ್ಯತೆ ಎಂಬುದರಲ್ಲಿ ಅರ್ಥ ಏನಿದೆ ? ಇದರ ಬಗ್ಗೆ ಸ್ಪಷ್ಟಪಡಿಸಬೇಕು. ಆಮೇಲೆ ಇನ್ನೊಂದು ಏನೆಂದರೆ ಕರ್ನಾಟಕದಲ್ಲಿ ಕನ್ನಡಕ್ಕೇ ಆದ್ಯತೆ ಎಂದು ರಾಜ್ಯ ಸರ್ಕಾರ ತನ್ನ ನಿಲುವನ್ನು ಕೇಂದ್ರಕ್ಕೆ ಏನು ಸ್ಪಷ್ಟಪಡಿಸಿದೆ ಇದು ಪರಿಪೂರ್ಣ ಎಂದು ಅನ್ನಿಸುವುದಿಲ್ಲವೆಂಬುದು ನನ್ನ ಭಾವನೆ. ಇದಕ್ಕೆ ಸರ್ಕಾರದವರು ಏನು ಉತ್ತರ ಕೊಡುತ್ತಾರೆ ?

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ, ಇದರಿಂದ ರಾಜ್ಯದ ಶಿಕ್ಷಣದ ಮೇಲೆ ಏನೂ ಪರಿಣಾಮವಾಗುವುದಿಲ್ಲ. ತಮಿಳುನಾಡು ಮತ್ತು ಆಂಧ್ರಗಳಲ್ಲಿ ಇದನ್ನು ಒಪ್ಪಲಿಲ್ಲವೆಂದು ಮಾನ್ಯ ಸದಸ್ಯರು ಹೇಳಿದರು. ಕಳೆದ ತೀಗಳು ಆ ರಾಜ್ಯಗಳ ಮಂತ್ರಿಗಳು ಮತ್ತು ನಾವು ಮೂವರು ಡೆಲ್ಲಿಯಲ್ಲಿ ಕಾನ್ಫರೆನ್ಸ್‌ನಲ್ಲಿ ಸೇರಿದ್ದೆವು. ಅವರೂ ಕೂಡಾ ತಮ್ಮಲ್ಲಿ ನವೋದಯ ಶಾಲೆಗಳು ಆಗಬೇಕೆಂದು ಒಪ್ಪಿಕೊಂಡಿದ್ದಾರೆ. ಒಂದು ಸಮಸ್ಯೆ ಏನೆಂದರೆ, ಹಿಂದಿಯನ್ನು ಹೇರುವುದಕ್ಕೋಸ್ಕರ ಮಾಡುತ್ತಿದ್ದಾರೆಂಬ ಅಭಿಪ್ರಾಯ ಇತ್ತು. ೬ನೇ ಕ್ಲಾಸ್‌ನಲ್ಲಿ ನಮ್ಮ ಭಾಷೆಯೇ ಕನ್ನಡವೇ ಇರುತ್ತದೆ. ನಾವು ಈಗಾಗಲೇ ತ್ರಿಭಾಷಾ ಸೂತ್ರವನ್ನು ಒಪ್ಪಿಕೊಂಡಿದ್ದೇವೆ. ಆದುದರಿಂದ ಇದು ಹೆಚ್ಚು ಪರಿಣಾಮವಾಗುವುದಿಲ್ಲ. ಇಲ್ಲಿಯ ವಿದ್ಯಾರ್ಥಿಗಳನ್ನು ಬೇರೆ ಕಡೆ ಕಳುಹಿಸಬಹುದು ಹಾಗೂ ಅಲ್ಲಿಯ ವಿದ್ಯಾರ್ಥಿಗಳನ್ನು ಇಲ್ಲಿಗೆ ಕರೆಯಿಸಿಕೊಳ್ಳಬಹುದು. ಭಾವೈಕ್ಯತೆ ಎಲ್ಲಾ ಕಡೆ ಬರಲಿ ಎನ್ನುವ ಉದ್ದೇಶ ಕೇಂದ್ರ ಸರ್ಕಾರದ್ದು ಇದೆ. ಇದರಿಂದ ದುಷ್ಪರಿಣಾಮವೇನೂ ಆಗುವುದಿಲ್ಲ.

ನಿಯಮಂ–೩೩೪ರ ಮೇರೆಗೆ

ಅಧ್ಯಕ್ಷರು.—ಈಗ ನಿಯಮ ೩೩೪ರ ಕೆಳಗೆ ಚರ್ಚೆ

1) ಸಾರ್ವಜನಿಕ ಗ್ರಂಥಾಲಯಗಳ ನಿರ್ದೇಶಕರ ಹುದ್ದೆಯನ್ನು ಉಚ್ಚ ನ್ಯಾಯಾಲಯದ ತೀರ್ಪಿನಂತೆ ಭರ್ತಿಮಾಡುವುದು,

ಶ್ರೀ ಕೆ. ಬಿ. ಶಾಣಪ್ಪ—ಅಧ್ಯಕ್ಷರೇ, ಕರ್ನಾಟಕ ಉಚ್ಚ ನ್ಯಾಯಾಲಯವು ಈಗಾಗಲೇ ಸಾರ್ವಜನಿಕ ಗ್ರಂಥಾಲಯಗಳ ನಿರ್ದೇಶಕರ ಹುದ್ದೆಯನ್ನು ಇಲಾಖೆಯ ಮುಖ್ಯ ಗ್ರಂಥಾಲಯಾಧಿಕಾರಿಗಳನ್ನೇ ನೇಮಕ ಮಾಡಬೇಕೆಂದು ತೀರ್ಪು ನೀಡಿದ್ದು ಆ ಸ್ಥಾನವನ್ನು ಇಲ್ಲಿಯವರೆಗೆ ಭರ್ತಿ ಮಾಡದೇ ಇರುವುದು ಮತ್ತು ಅದಕ್ಕೆ ವಿಳಂಬವೇಕೆ ? ಈ ಸ್ಥಾನಕ್ಕೆ ಆ ಖಾತೆಯ ನೇಮಕಾತಿಯ ನಿಯಮಗಳು ಅನುಸರಿಸುವಂತೆ ಹಾಗೂ ಶೇಕಡ ಪ್ರಮಾಣ (ರೋಸ್ಟರ್ ಸಿಸ್ಟಮ್) ಅನ್ವಯಿಸಿ ಈ ಸ್ಥಾನವನ್ನು ಭರ್ತಿ ಮಾಡಲು ಇನ್ನೂ ವಿಳಂಭವಾಗುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಹಾಗಾದರೆ ಈ ವಿಷಯದಲ್ಲಿ ಈ ಸದನಕ್ಕೆ ಸಂಪೂರ್ಣ ವಿವರಣೆ ಸಲ್ಲಿಸಬೇಕು. ಈ ಹುದ್ದೆಗೆ ಶೇಕಡಾವಾರು ಪ್ರಮಾಣ ಅನ್ವಯಿಸುತ್ತಿದ್ದು ಇಡೀ ಇಲಾಖೆಯಲ್ಲಿ ಸಮಂಜಸವಾದ ಪರಿಶಿಷ್ಟ ಜಾತಿ ಮತ್ತು ಜನಾಂಗದ ಮುಖ್ಯ ಗ್ರಂಥಾಧಿಕಾರಿಗಳ ಸಂಖ್ಯೆ ಎಷ್ಟೆಂಬುದು ತಿಳಿಸಬೇಕು.

ಶ್ರೀ ರಾಮಕೃಷ್ಣ ಹೆಗ್ಡೆ.—ಮಾನ್ಯ ಅಧ್ಯಕ್ಷರೇ, ಸಾರ್ವಜನಿಕ ಗ್ರಂಥಾಲಯ ನಿರ್ದೇಶಕರ ಹುದ್ದೆಯನ್ನು ಭರ್ತಿ ಮಾಡಲು ದಿನಾಂಕ ೧–೮–೧೯೮೬ರಿಂದ ೬ ವಾರಗಳ ಅವಧಿಯನ್ನು ರಾಜ್ಯ ಮಂಜಿ ನ್ಯಾಯಾಲಯ ನೀಡಿದೆ. ಈ ಅವಧಿ ದಿನಾಂಕ ೧೫–೯–೧೯೮೬ಕ್ಕೆ ಮುಗಿಯಲಿದ್ದು ಅಷ್ಟರಲ್ಲೇ ನಿರ್ದೇಶಕರ ಹುದ್ದೆಯನ್ನು ತುಂಬಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.

ಈ ಇಲಾಖೆಯಲ್ಲಿರುವ ಮುಖ್ಯ ಗ್ರಂಥಾಧಿಕಾರಿಗಳು ಉಪ ಮುಖ್ಯ ಗ್ರಂಥಾಧಿಕಾರಿಗಳ ಹುದ್ದೆ 'ಬಿ' ಗುಂಪಿನ ಹುದ್ದೆಯಾಗಿದ್ದು 'ಎ' ಗುಂಪಿನ ಹುದ್ದೆ ಇಲಾಖೆಯಲ್ಲಿ ನಿರ್ದೇಶಕರ ಹುದ್ದೆಯೊಂದೇ ಇದ್ದು, ಈ ಹುದ್ದೆಯನ್ನು ತುಂಬಲು ಮೀಸಲಾತಿ ನಿಯಮಗಳನ್ನು ಅನುಸರಿಸಲಾಗುತ್ತದೆ.

ಈ ಇಲಾಖೆಯಲ್ಲಿ ಒಟ್ಟು ೩೧ ಜನ ಮುಖ್ಯ ಗ್ರಂಥಾಧಿಕಾರಿಗಳು/ಉಪ ಮುಖ್ಯ ಗ್ರಂಥಾಧಿಕಾರಿಗಳಿದ್ದು ಇವರಲ್ಲಿ ೪ ಅಧಿಕಾರಿಗಳು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದಾರೆ. ನಿಯಮಾವಳಿಗಳ ಪ್ರಕಾರ ಅವರ ಅರ್ಹತೆಯನ್ನು ಪರಿಶೀಲಿಸಿ ಉಚ್ಚ ನ್ಯಾಯಾಲಯವು ಆದೇಶಿಸಿರುವ ಪರಿಮಿತಿಯೊಳಗೆ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ.

2) ಸರ್ಕಾರಿ ಜೂನಿಯರ್ ಕಾಲೇಜು, ಹೈಸ್ಕೂಲು; ಪ್ರೈಮರಿ ಶಾಲೆಗಳ ಉಪಾಧ್ಯಾಯರುಗಳಿಗೆ ವೇತನ ಪಾವತಿಯನ್ನು ಬ್ಯಾಂಕುಗಳ ಮೂಲಕ ಮಾಡುವುದು,

ಶ್ರೀ ಜಿ. ಎಸ್. ಆಚಾರ್.—ಅಧ್ಯಕ್ಷರೇ ಸರಕಾರಿ ಜೂನಿಯರ್ ಕಾಲೇಜು, ಹೈಸ್ಕೂಲು, ಪ್ರಾಥಮಿಕ ಮುಖ್ಯೋಪಾಧ್ಯಾಯರುಗಳ ಹೈಯರ್ ಪ್ರೈಮರಿ ಶಾಲೆಗಳ ಉಪಾಧ್ಯಾಪಕರಿಗೆ ವೇತನ ಪಾವತಿಯನ್ನು ಬ್ಯಾಂಕುಗಳ ಮೂಲಕವೇ ಮಾಡಬೇಕೆಂದು ಸರಕಾರದ ನೀತಿಯಿಂದಾಗಿ ಸಂಬಂಧಪಟ್ಟ